ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	954
ಸದಸ್ಯರ ಹೆಸರು	:	ಶ್ರೀಮತಿ ಎಸ್. ವೀಣಾ ಅಚ್ಚಯ್ಯ
ಉತ್ತರಿಸುವ ದಿನಾಂಕ	:	21/12/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಡಗು ಜಿಲ್ಲೆಯಲ್ಲಿ ಎಷ್ಟು ನಗರ ಸ್ಥಳೀಯ ಸಂಸ್ಥೆ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ) ಗಳಿವೆ; ಸದರಿ ಸಂಸ್ಥೆಗಳಲ್ಲಿನ ಜನಸಂಖ್ಯೆ, ವಾರ್ಡ್‌ಗಳ ವಿವರ, ವಿಸ್ತೀರ್ಣ ಹಾಗೂ ವ್ಯಾಪ್ತಿಯ ವಿವರಗಳೊಂದಿಗೆ ಮಾಹಿತಿ ನೀಡುವುದು;</td><td>ಕೊಡಗು ಜಿಲ್ಲೆಯಲ್ಲಿ 04 ನಗರ ಸ್ಥಳೀಯ ಸಂಸ್ಥೆಗಳು ಇರುತ್ತವೆ. ಈ ಸ್ಥಳೀಯ ಸಂಸ್ಥೆಗಳಲ್ಲಿನ ಜನಸಂಖ್ಯೆ (2011 ರ ಜನಗಣತಿಯನ್ವಯ), ವಾರ್ಡು ವಿವರ, ವಿಸ್ತೀರ್ಣ ಹಾಗೂ ವ್ಯಾಪ್ತಿಯ ವಿವರ:
<table>
<tr><th colspan="2">ಸ್ಥಳೀಯ ಸಂಸ್ಥೆ</th><th>ವಾರ್ಡು</th><th>ಜನ ಸಂಖ್ಯೆ</th><th>ವಿಸ್ತೀರ್ಣ ಚ.ಕಿ.ಮೀ.</th></tr>
<tr><td>1.</td><td>ಮಡಿಕೇರಿ, ನಗರಸಭೆ</td><td>23</td><td>33381</td><td>15.92</td></tr>
<tr><td>2.</td><td>ಕುಶಾಲನಗರ, ಪಟ್ಟಣ ಪಂಚಾಯಿತಿ</td><td>16</td><td>15326</td><td>3.26</td></tr>
<tr><td>3.</td><td>ಸೋಮವಾರಪೇಟೆ, ಪಟ್ಟಣ ಪಂಚಾಯಿತಿ</td><td>11</td><td>6729</td><td>1.33</td></tr>
<tr><td>4.</td><td>ವಿರಾಜಪೇಟೆ, ಪಟ್ಟಣ ಪಂಚಾಯಿತಿ</td><td>18</td><td>17246</td><td>2.83</td></tr>
</table></td></tr>
<tr><td>ಆ)</td><td>ಸದರಿ ನಗರ ಸ್ಥಳೀಯ ಸಂಸ್ಥೆ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ) ಗಳಲ್ಲಿ ಯಾವುದನ್ನಾದರೂ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)</td><td>ಕೊಡಗು ಜಿಲ್ಲೆಯ ಕುಶಾಲನಗರ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಪ್ರತ್ಯೇಕ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ.</td></tr>
</table>

ಇ) ಸದರಿ ಸಂಸ್ಥೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು;

ಈ) ಈ ಸಂಸ್ಥೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ, ಪೌರ ಕಾರ್ಮಿಕರ ಸಂಖ್ಯೆ ಇದೆಯೇ; ಅಥವಾ ಕೊರತೆ ಇದೆಯೇ;

ಕೊಡಗು ಜಿಲ್ಲೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ವಿವರ:

ಕ್ರ. ಸಂ.	ನಗರ ಸ್ಥಳೀಯ ಸಂಸ್ಥೆಯ ಹೆಸರು	ಮಂಜೂರಾದ ಹುದ್ದೆಗಳು	ಕರ್ತವ್ಯ ನಿರತರು (ಖಾಯಂ/ ನೇರಪಾವತಿ)	ಖಾಲಿ ಹುದ್ದೆ
1.	ಮಡಿಕೇರಿ, ನಗರಸಭೆ	49	39	10
2.	ಕುಶಾಲನಗರ, ಪ.ಪಂ.	24	24	0
3.	ಸೋಮವಾರಪೇಟೆ, ಪ.ಪಂ.	10	10	0
4.	ವಿರಾಜಪೇಟೆ, ಪ.ಪಂ.	27	26	1
	ಒಟ್ಟು	**110**	**99**	**11**

ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೇಲ್ತಿಳಿಸಿರುವಂತೆ ಪೌರ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದು, ಅತೀ ಹೆಚ್ಚು ಹುದ್ದೆಗಳು ಖಾಲಿ ಇರುವುದಿಲ್ಲ.

ಉ) ಕೊರತೆ ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಜನಸಂಖ್ಯೆಗನುಗುಣವಾಗಿ ಪೌರ ಕಾರ್ಮಿಕರ ನೇಮಕಾತಿ ಮಾಡಲಾಗುವುದು?

ಸರ್ಕಾರದ ಆದೇಶ ಸಂಖ್ಯೆ: 126 ಟಿಎಂಎಸ್ 2016 ದಿನಾಂಕ: 04.12.2017ರಲ್ಲಿ ಪೌರಕಾರ್ಮಿಕರನ್ನು ಒಂದು ಬಾರಿಗೆ ವಿಶೇಷ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮಡಿಕೇರಿ ನಗರಸಭೆಯಲ್ಲಿ 2018 ರ ಪ್ರಕಾರ ಜನಸಂಖ್ಯೆ 34300 ಇದ್ದು 700:1 ರಂತೆ ಒಟ್ಟು: 49 ಹುದ್ದೆಗಳು, ಅದರಲ್ಲಿ ನೇರ ನೇಮಕಾತಿಗೆ ಶೇ.50 ರಂತೆ 25 ಹುದ್ದೆಗಳು ಮತ್ತು ನೇರಪಾವತಿಗೆ ಶೇ.50 ರಂತೆ 24 ಹುದ್ದೆಗಳು ಲಭ್ಯವಾಗುತ್ತವೆ. ಆದರೆ ಮಡಿಕೇರಿ ನಗರಸಭೆಯಲ್ಲಿ ವಿಶೇಷ ನೇಮಕಾತಿಗೆ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ 21 ಖಾಯಂ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದ ಕಾರಣ 4 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ, 04 ನೌಕರರನ್ನು ವಿಶೇಷ ನೇಮಕಾತಿ ಮೂಲಕ ಖಾಯಂ ಮಾಡಲಾಗಿರುತ್ತದೆ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ ವಿಶೇಷ ನೇಮಕಾತಿಗೆ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ 15 ಖಾಯಂ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದ ಕಾರಣ 12 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ, 06 ನೌಕರರನ್ನು ವಿಶೇಷ ನೇಮಕಾತಿ ಮೂಲಕ ಖಾಯಂ ಮಾಡಲಾಗಿರುತ್ತದೆ

ಇದಲ್ಲದೇ ಪೌರಕಾರ್ಮಿಕರ ನಿವೃತ್ತಿ, ಮರಣ ಮತ್ತು ಇತರ ಕಾರಣಗಳಿಂದ ತೆರವಾಗುವ ನೇರಪಾವತಿ ಹುದ್ದೆಗಳ ಭರ್ತಿ ಸಂಬಂಧ ಸ್ವೀಕೃತವಾಗಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ನಅಇ 43 ಎಲ್‌ಸಿಕ್ಯೂ 2021

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ